ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಮೈಸೂರು ವಿಭಾಗ, ಮೈಸೂರು,
ಅರಣ್ಯ ಭವನ, ಅಶೋಕಪುರಂ, ಮೈಸೂರು

ದೂರವಾಣಿ: 0821-2483853
ಇ-ಮೇಲ್- dcfmdm@gmail.com

ಸಂ: ಸಿ2/ಭೂಮಿ/ಸಿಆರ್-09/2025-26

ದಿನಾಂಕ: 13.01.2026.

## ಸಭಾ ಸೂಚನ ಪತ್ರ

**ವಿಷಯ:-** ಕ್ರೂಢಿಕೃತ ಅರಣ್ಯ ಭೂಮಿಗಳ ದಾಖಲೆಗಳನ್ನು ಸಿದ್ಧಪಡಿಸಲು ಹಾಗೂ ರಾಜ್ಯದ ಯಾವುದೇ ಅರಣ್ಯ ಪ್ರದೇಶವನ್ನು ಕಂದಾಯ ಇಲಾಖೆಯು ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗೆ ಮಂಜೂರು ಮಾಡಿರುವ ಪ್ರಕರಣಗಳನ್ನು ಪತ್ತೆಹಚ್ಚುವ ವಿಷಯದ ಕುರಿತು ಕಾರ್ಯಗಾರವನ್ನು ನೋಡಲ್ ಅಧಿಕಾರಿಗಳು ಆಯೋಜಿಸುವ ಕುರಿತು.

**ಉಲ್ಲೇಖ:-**
1. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ, ಬೆಂಗಳೂರುರವರ ಕಛೇರಿ ಪತ್ರ ಸಂಖ್ಯೆ: KFD/WP/RFO(DF)1/2021, E-454656, ದಿನಾಂಕ: 08.01.2026.
2. ಸರ್ಕಾರದ ಆದೇಶ ಸಂಖ್ಯೆ: ಎಫ್ಇಇ/185/ಎಫ್ಎಎಫ್/2011 ಬೆಂಗಳೂರು ದಿನಾಂಕ: -06.03.2025.
3. ಸರ್ಕಾರದ ಆದೇಶ ಸಂಖ್ಯೆ: ಎಫ್ಇಇ/124/ಎಫ್ಎಲ್ಎಲ್/2025 ಬೆಂಗಳೂರು ದಿನಾಂಕ: 15.09.2025.
4. ಸರ್ಕಾರದ ಆದೇಶ ಸಂಖ್ಯೆ: ಎಫ್ಇಇ/304/ಎಫ್ಎಲ್ಎಲ್/2025 ಬೆಂಗಳೂರು ದಿನಾಂಕ: 30.12.2025.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳನ್ವಯ ರಾಜ್ಯದ ಯಾವುದೇ ಅರಣ್ಯ ಪ್ರದೇಶವನ್ನು ಕಂದಾಯ ಇಲಾಖೆಯು ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಗೆ ಮಂಜೂರು ಮಾಡಿರುವ ಪ್ರಕರಣಗಳನ್ನು ಪತ್ತೆಹಚ್ಚುವ ವಿಷಯದ ಕುರಿತು ರಾಜ್ಯ ಮತ್ತು ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡಗಳನ್ನು (SIT) ರಚಿಸಿ, ಆಯಾಯ ತಂಡಗಳು ನಿರ್ವಹಿಸಬೇಕಾಗಿರುವ ಕಾರ್ಯಗಳ ಕಾರ್ಯವಿಧಾನವನ್ನು (TOR) ನಿಗಧಿಪಡಿಸಿರುತ್ತದೆ.

ಅದರಂತೆ, ಆಯಾಯ ಸಮಿತಿಗಳು/ ತಂಡಗಳು ನಿಗಧಿತ ಕಾರ್ಯಗಳನ್ನು ನಿರ್ವಹಿಸಿ ಸಕಾಲದೊಳಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಕಾರ್ಯಗಾರವನ್ನು ಹಮ್ಮಿಕೊಂಡು ಕಾರ್ಯವಿಧಾನವನ್ನು ಜಾರಿಗೊಳಿಸಿ ಉಸ್ತುವಾರಿ ವಹಿಸಲು ಮೈಸೂರು ಜಿಲ್ಲೆಗೆ ನೋಡಲ್ ಅಧಿಕಾರಿಗಳನ್ನಾಗಿ ಡಾ. ಮಾಲತಿಪ್ರಿಯಾ, ಭಾ.ಅ.ಸೇ., ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಚಾಮರಾಜನಗರ ವೃತ್ತ, ಚಾಮರಾಜನಗರ ಇವರನ್ನು ನೋಡೆಲ್ ಅಧಿಕಾರಿಯನ್ನಾಗಿ ನಿಯೋಜಿಸಿದ್ದು, ಜಿಲ್ಲಾಮಟ್ಟದ ತಜ್ಞರ ಸಮಿತಿ/ ತಂಡಗಳು ನಿರ್ವಹಿಸಬೇಕಿರುವ ಕಾರ್ಯಗಳ ಕಾರ್ಯವಿಧಾನದ ಕುರಿತು ಸೂಕ್ತ ತರಬೇತಿಯನ್ನು ನೀಡಲು ಈ ಕೆಳಕಾಣಿಸಿದ ದಿನಾಂಕದಂದು ಕಾರ್ಯಾಗಾರವನ್ನು ಹಮ್ಮಿಕೊಳ್ಳಲು ಸೂಚಿಸಿದೆ.

| ಕ್ರ.ಸಂ | ನೋಡೆಲ್ ಅಧಿಕಾರಿಯ ಹೆಸರು | ವೃತ್ತ | ಜಿಲ್ಲೆ | ಅರಣ್ಯ ವಿಭಾಗ | ಕಾರ್ಯಾಗಾರದ ದಿನಾಂಕ | ಕಾರ್ಯಾಗಾರವನ್ನು ಕೈಗೊಳ್ಳಬೇಕಿರುವ ಸ್ಥಳ | ಸಮಯ |
|---|---|---|---|---|---|---|---|
| 1 | ಡಾ. ಮಾಲತಿ ಪ್ರಿಯಾ, ಭಾ.ಅ.ಸೇ., ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಚಾಮರಾಜನಗರ ವೃತ್ತ, ಚಾಮರಾಜನಗರ | ಮೈಸೂರು | ಮೈಸೂರು | ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ | 17.01.2026 | ದಿ\|\| ದೇವರಾಜ ಅರಸು ಸಭಾಂಗಣ ಜಿಲ್ಲಾ ಪಂಚಾಯತ್, ಮೈಸೂರು, https://meet.google.com/hbv-qgtq-xrg | ಬೆಳಿಗ್ಗೆ 11.00 ಗಂಟೆಗೆ |
| | | | | ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ | | | |
| | | | | ಮೈಸೂರು ಪ್ರಾದೇಶಿಕ ವಿಭಾಗ | | | |
| | | | | ಮೈಸೂರು ವನ್ಯಜೀವಿ ವಿಭಾಗ | | | |
| | | | | ಹುಣಸೂರು ಪ್ರಾದೇಶಿಕ ವಿಭಾಗ | | | |
| | | | | ಮೈಸೂರು ಸಾಮಾಜಿಕ ವಿಭಾಗ | | | |
| | | | ಮಂಡ್ಯ | ಮಂಡ್ಯ ಪ್ರಾದೇಶಿಕ ವಿಭಾಗ, | | | |
| | | | | ಮಂಡ್ಯ ಸಾಮಾಜಿಕ ವಿಭಾಗ | | | |
| | | ಚಾಮರಾಜ ನಗರ | ಚಾಮರಾಜ ನಗರ | ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ | | | |
| | | | | ಮಲೈಮಹದೇಶ್ವರ ವನ್ಯಜೀವಿ ವಿಭಾಗ | | | |
| | | | | ಕಾವೇರಿ ವನ್ಯಜೀವಿ ವಿಭಾಗ | | | |
| | | | | ಚಾಮರಾಜನಗರ ಸಾಮಾಜಿಕ ವಿಭಾಗ | | | |

ಆದ್ದರಿಂದ ಸದರಿ ಪಟ್ಟಿಯಲ್ಲಿ ನಿಗಧಿಪಡಿಸಿರುವಂತೆ ಕಾರ್ಯಾಗಾರವನ್ನು ಕ್ರಮಬದ್ಧವಾಗಿ ಕಾರ್ಯಗತಗೊಳಿಸಲು ಉದ್ದೇಶಿಸಿದ್ದು, ಜಿಲ್ಲಾ ಮಟ್ಟದ ತಜ್ಞರ ಸಮಿತಿಯ ಹಾಗೂ ತನಿಖಾ ತಂಡಗಳ ಕಂದಾಯ, ಜಿಲ್ಲಾ ಪಂಚಾಯತ್, ಭೂದಾಖಲೆ ಹಾಗೂ ಅರಣ್ಯ ಇಲಾಖೆಯ ಎಲ್ಲಾ ಅಧಿಕಾರಿಗಳು ತಪ್ಪದೇ ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಬೇಕೆಂದು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ
ಮೈಸೂರು ವಿಭಾಗ, ಮೈಸೂರು

2D/Land Section/C2letter-2025-26

ಪ್ರತಿಯನ್ನು ಗೌರವಗಳೊಂದಿಗೆ :

1. ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಚಾಮರಾಜನಗರ ವೃತ್ತ, ಚಾಮರಾಜನಗರ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಹುಲಿ ಯೋಜನೆ, ಮೈಸೂರುರವರಿಗೆ ಸಲ್ಲಿಸುತ್ತಾ, ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು ಕೋರಿದೆ.
3. ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕಾರ್ಯಯೋಜನೆ ವೃತ್ತ, ಮೈಸೂರುರವರಿಗೆ ಮಾಹಿತಿಗಾಗಿ ಸಲ್ಲಿಸಿದೆ
4. ಮಾನ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವೃತ್ತ, ಮೈಸೂರುರವರಿಗೆ ಸಲ್ಲಿಸುತ್ತಾ, ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು ಕೋರಿದೆ.
5. ಮಾನ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರರವರಿಗೆ ಸಲ್ಲಿಸುತ್ತಾ, ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು ಕೋರಿದೆ.
6. ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ/ ಚಾಮರಾಜನಗರ ಜಿಲ್ಲೆ/ ಮಂಡ್ಯ ಜಿಲ್ಲೆ ಇವರಿಗೆ ಸಲ್ಲಿಸುತ್ತಾ, ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು ಕೋರಿದೆ.
7. ಮಾನ್ಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು/ ಚಾಮರಾಜನಗರ/ ಮಂಡ್ಯ ಇವರಿಗೆ ಸಲ್ಲಿಸುತ್ತಾ, ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು ಕೋರಿದೆ.
8. ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು/ ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು ಹಾಗೂ ನಿಯೋಜಿತ ಸಮನ್ವಯಾಧಿಕಾರಿಗಳಿಗೆ ನಿಮ್ಮ ವಿಭಾಗದ ಮಾಹಿತಿಯನ್ನು ನೀಡುವುದು
9. ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ, ಮೈಸೂರು/ ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ/ಮಲೈಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ/ಮಂಡ್ಯ ವಿಭಾಗ/ ಮೈಸೂರು ವನ್ಯಜೀವಿ ವಿಭಾಗ, ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು ಹಾಗೂ ನಿಯೋಜಿತ ಸಮನ್ವಯಾಧಿಕಾರಿಗಳಿಗೆ ನಿಮ್ಮ ವಿಭಾಗದ ಮಾಹಿತಿಯನ್ನು ನೀಡುವುದು
10. ಮೈಸೂರು ಚಾಮರಾಜನಗರ ಮತ್ತು ಮಂಡ್ಯ ವಿಭಾಗ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಕಳುಹಿಸುತ್ತಾ, ಸದರಿ ಕಾರ್ಯಾಗಾರದಲ್ಲಿ ವಲಯ ಅರಣ್ಯಾಧಿಕಾರಿಗಳೊಂದಿಗೆ ಭಾಗವಹಿಸುವುದು ಹಾಗೂ ಉಪ ವಲಯ ಅರಣ್ಯಾಧಿಕಾರಿಗಳು ಮತ್ತು ಕೆಳಹಂತದ ಸಿಬ್ಬಂದಿಗಳು ವೀಡಿಯೋ ಸಂವಾದದ ಮೂಲಕ ಭಾಗವಹಿಸಲು ಸೂಚಿಸುವುದು
11. ಮೈಸೂರು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್ ಇವರಿಗೆ ಕಳುಹಿಸುತ್ತಾ, ಸದರಿ ಕಾರ್ಯಾಗಾರದಲ್ಲಿ ಭಾಗವಹಿಸುವುದು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಕೆಳಹಂತದ ಸಿಬ್ಬಂದಿಗಳು ವೀಡಿಯೋ ಸಂವಾದ ಮೂಲಕ ಭಾಗವಹಿಸಲು ತಿಳಿಸುವುದು.
12. ಮಾನ್ಯ ಭೂದಾಖಲೆಗಳ ಜಂಟಿ ನಿರ್ದೇಶಕರು, ಮೈಸೂರು/ ಚಾಮರಾಜನಗರ/ ಮಂಡ್ಯ ಇವರಿಗೆ ಕಳುಹಿಸುತ್ತಾ, ಸದರಿ ಕಾರ್ಯಾಗಾರದಲ್ಲಿ ಭೂದಾಖಲೆಗಳ ಸಹಾಯಕ ನಿರ್ದೇಶಕರುಗಳೊಂದಿಗೆ ಭಾಗವಹಿಸುವುದು ಹಾಗೂ ಸರ್ವೆಯರ್ ಮತ್ತು ಕೆಳಹಂತದ ಸಿಬ್ಬಂದಿಗಳು ವೀಡಿಯೋ ಸಂವಾದದ ಮೂಲಕ ಭಾಗವಹಿಸಲು ತಿಳಿಸುವುದು.
13. ಮಾನ್ಯ ಮೈಸೂರು ಚಾಮರಾಜನಗರ, ಮತ್ತು ಮಂಡ್ಯ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ತಹಶೀಲ್ದಾರ್ ರವರಿಗೆ ಕಳುಹಿಸುತ್ತಾ, ಸದರಿ ಕಾರ್ಯಾಗಾರದಲ್ಲಿ ಭಾಗವಹಿಸುವುದು ಹಾಗೂ ಉಪತಹಶೀಲ್ದಾರ್ ಮತ್ತು ಕೆಳಹಂತದ ಸಿಬ್ಬಂದಿಗಳು ವೀಡಿಯೋ ಸಂವಾದ ಮೂಲಕ ಭಾಗವಹಿಸಲು ತಿಳಿಸು .
14. ವಲಯ ಅರಣ್ಯಾಧಿಕಾರಿ, ಐಸಿಟಿ ಘಟಕ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಲು ಸೂಚಿಸಿದೆ.